ಪಂಪನ ಬರವಣಿಗೆಯಲ್ಲಿ ಹಲವು ಕಡೆ ಎದುರಾಗುತ್ತವೆ. ವೃಷಭನಾಥ, ಬಾಹುಬಲಿ ಮುಂತಾದ ಪಾತ್ರಗಳ ಬಗ್ಗೆ ಅಪಾರವಾದ ಗೌರವವನ್ನು ತೋರಿಸಿದರೂ ಪಂಪನು ಓಲುವೆಯು ಭೋಗದ ಫಲವಾದ ಐಂದ್ರಿಯಿಕವಾದ ಸುಖಗಳ ಕಡೆಗೇ ಇದೆಯೆಂದು ತೋರುತ್ತದೆ. ಅವನು 'ಭರತೇಶ ವೈಭವ'ದ ರತ್ನಾಕರವರ್ಣಿಯ ಹಾಗೆ, ತ್ಯಾಗ–ಭೋಗಗಳ ನಡುವೆ ಕೃತಕವಾದ ಸಂಯೋಜನೆಯನ್ನೂ ತೋರಿಸುವುದಿಲ್ಲ. ಅವನು ಸೃಷ್ಟಿಸುವ ಎಲ್ಲ ಪಾತ್ರಗಳೂ ಕಡು ವ್ಯಾಮೋಹಿಗಳು. ಈ ಮಾತಿಗೆ ಸ್ವತಃ ಆದಿದೇವ ಬಾಹುಬಲಿಯರೂ ಅಪವಾದವಲ್ಲ. ಅವರೆಲ್ಲರಿಗೂ ವೈರಾಗ್ಯವು ಹೆಚ್ಚೆಂದರೆ ಕೊನೆಯ ನಿಲ್ದಾಣ. ಲಲಿತಾಂಗ–ಸ್ವಯಂಪ್ರಭೆ, ಶ್ರೀಮತಿ–ವಜ್ರಜಂಘ, ಅರ್ಜುನ–ಸುಭದ್ರೆ ಮುಂತಾದವರ ಐಂದ್ರಿಯಿಕ ಎತ್ತರಗಳು ಹೆಡನಿಸ್ಟಿಕ್ ಜೀವನಕ್ರಮದ ಮಾದರಿಗಳಾಗಿವೆ. ಆ ಸುಖಗಳ ಸಂಗಡವೇ ಅವರು 'ಸೆನ್ಸಿಟಿವ್' ಕೂಡ ಆಗಿರುತ್ತಾರೆ. ತೀವ್ರವೂ ಸೂಕ್ಷ್ಮವೂ ಆದ ಇಂದ್ರಿಯಾನುಭವಗಳು ಮನುಷ್ಯನ ಬದುಕಿನ ಆಳ–ಅಗಲಗಳನ್ನು ಹೆಚ್ಚಿಸುತ್ತವೆಂಬ ಸತ್ಯವನ್ನೇ ಪಂಪನೂ ಹೇಳುತ್ತಿದ್ದಾನೆ. ಅವನ ಪ್ರಕಾರ ಅವು ಮಾರಕವೇನೂ ಅಲ್ಲ. ಆದ್ದರಿಂದಲೇ ಪಂಪನ ಕಾವ್ಯಗಳ ಧಾರ್ಮಿಕ ಆವರಣವು 'ಮಿಸ್ ಲೀಡಿಂಗ್' ಆದುದು. ಅವನು ಧರ್ಮದಿಂದ ನಿರ್ದೇಶಿತವಾದ, ಸಂಯಮದಿಂದಲೇ ಒಣಗುವ ಜೀವನಕ್ರಮದ ವಿರುದ್ಧವಾದ ಬಂಡಾಯವನ್ನೇ ತೋರಿಸಿದ್ದಾನೆ. ಅವನು ಮಾವು–ಮಲ್ಲಿಗೆ–ಕೋಗಿಲೆ–ದುಂಬಿಗಳ ಪರವಾದ ರೆಟರಿಕ್ ಅನ್ನು ಬೆಳೆಸುವುದು ಕೂಡ ಈ ನೆಲೆಯಲ್ಲಿಯೇ. ಇದು ಆ ಕಾಲದ ಕರ್ನಾಟಕದ ಫ್ಯೂಡಲ್ ಮತ್ತು ಸಾಮಂತಶಾಹಿಯ ಬದುಕಿನ ವಿವರಗಳ ನಿರೂಪಣೆ ಮಾತ್ರವಾಗಿ ಉಳಿಯುವುದಿಲ್ಲ. ಬದಲಾಗಿ, ಇದು ಪಂಪನು ಎಲ್ಲ ಮನುಷ್ಯರಿಗೂ ಸಾಧ್ಯವೆಂದು ನಂಬಿರುವ ಜೀವನಸಾಧ್ಯತೆಗಳ ಲೋಕ. ಶ್ರೀಮಂತಿಕೆ ಮತ್ತು ರಸಿಕತೆಗಳ ನಡುವೆ ಅಂತಹ ಪರಸ್ಪರ ಅವಲಂಬನೆಯಿಲ್ಲ. ಆದ್ದರಿಂದ ಪಂಪನ ದೇಶ–ಕಾಲ–ಸಂದರ್ಭ–ವಿವರಗಳನ್ನು ಬದಿಗಿಟ್ಟು ನೋಡಿದಾಗ ಪಂಪನು ಎಲ್ಲ ಕಾಲದ ಸಮಸ್ಯೆಯೊಂದನ್ನು ಆರೋಗ್ಯಕರವಾಗಿ ನೋಡಿರುವನೆಂಬುದು ಮನದಟ್ಟಾಗುತ್ತದೆ. ಅವನ ಕಾವ್ಯಗಳಿಗೆ ಇರುವ ಧಾರ್ಮಿಕ ಚೌಕಟ್ಟಿನ ವಿರುದ್ಧವಾದ ಒಳಬಂಡಾಯವೊಂದನ್ನು ಇಲ್ಲಿ ಗುರುತಿಸಬಹುದು. ಪಂಪನ ಧರ್ಮವು ಜೈನ, ವೈದಿಕ, ಬೌದ್ಧ ಮುಂತಾದ ಸಾಂಸ್ಥಿಕ ಜಡತೆಗಳಿಗಿಂತ ಭಿನ್ನವಾದ ಮಾನವಧರ್ಮ.

ಇ. ಪಂಪಭಾರತದ 'ಖಾಂಡವವನ ದಹನ'ದ ಪ್ರಸಂಗವು ನಾನು ಗಮನಿಸಲಿರುವ ಮೂರನೆಯ ಪ್ರಸಂಗ. ಯಮುನಾ ನದಿಯ ದಕ್ಷಿಣ ಭಾಗದಲ್ಲಿರುವ, ಹತ್ತು ಸಾವಿರ ಯೋಜನ ವಿಸ್ತೀರ್ಣದ ಖಾಂಡವವೆಂಬ ಕಾಡು, ಬೇಂಕಯಲ್ಲಿ ಸುಟ್ಟು ಬೂದಿಯಾಗಿದ್ದು ಈ ಘಟನೆಯ ಕೇಂದ್ರ. ಇದು ಆಕಸ್ಮಿಕವಾಗಿ ಹತ್ತಿಕೊಂಡ ಕಾಡುಕಿಚ್ಚಲ್ಲ. ಉದ್ದೇಶಪೂರ್ವಕವಾಗಿ ಹಚ್ಚಲಾದ ಬೆಂಕಿ. ಕಾಡನ್ನು ಕಾಪಾಡಬೇಕಾದ ರಾಜ ಅರ್ಜುನನೇ ಅದನ್ನು ಸುಡಲು ಅಗ್ನಿಗೆ ನೆರವಾಗುತ್ತಿದ್ದಾನೆ. ಅದನ್ನು ಆರಿಸಲು ಬರುವ ಮಳೆಯನ್ನು ಬಾಣಗಳ ಚಪ್ಪರ ಕಟ್ಟಿ ತಡೆಯುತ್ತಾನೆ.

ಈ ಘಟನೆಯನ್ನು ನಿರೂಪಿಸುತ್ತಿರುವ ಕವಿಯಾದರೋ ಪಂಪ. ಕಾಡನ್ನು, ಮಾವನ್ನು, ಮಲ್ಲಿಗೆಯನ್ನು ಪ್ರೀತಿಸುವವನು. ಬನವಾಸಿಯ ವನದಲ್ಲಿ ಕೋಗಿಲೆಯಾಗಿ ಮರಿದುಂಬಿಯಾಗಿ ಹುಟ್ಟಬೇಕೆಂದು ಕನಸುಕಂಡವನು. ಅಂಥ ವನದ ಸುಡುವಿಕೆ ಅವನಲ್ಲಿ ಗಾಢವಾದ ವಿಷಾದವನ್ನು ಮೂಡಿಸಿರಬೇಕು. ಈ ಸನ್ನಿವೇಶದ ನಿಜವಾದ ದ್ವಂದ್ವ ಇಲ್ಲಿದೆ. ಪಂಪನು ಈ ಸುಡುವಿಕೆಯನ್ನು ಸಮರ್ಥಿಸಬೇಕು. ಅದು ಕಥಾನಾಯಕನಾದ ಅರ್ಜುನನ ಪರಾಕ್ರಮಕ್ಕೆ, ದಾನಗುಣಕ್ಕೆ, ವಚನನಿಷ್ಠೆಗೆ ಸಾಕ್ಷಿಯೆಂದು ಹಾಡಿ ಹೊಗಳಬೇಕು. ಸಸ್ಯಜಗತ್ತು ಮತ್ತು ಪ್ರಾಣಿಜಗತ್ತು ವಿನಾಶವಾಗುವ ಬಗೆಯನ್ನು ವಿವರ ವಿವರವಾಗಿ ಹೇಳಬೇಕು. ಆದರೆ, ಇಂಥ ಕಡೆ ಒಬ್ಬ ನಿಜವಾದ ಕವಿಯ ಪ್ರತಿಭೆಯ ಪ್ರದರ್ಶನಕ್ಕೆ ಅವಕಾಶ ಸಿಗುತ್ತದೆ. ಪಠ್ಯವು ನೇರವಾಗಿ ನುಡಿಯುತ್ತಿರುವುದನ್ನು